ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 14-09-2022

**ಚಿಟಗುಪ್ಪಾ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 113/2022 ಕಲಂ 20(ಎ)ಎನ್.ಡಿ.ಪಿ.ಎಸ್. ಕಾಯ್ದೆ :-**

ದಿನಾಂಕ:13/09/2022 ರಂದು ಮುಂಜಾನೆ 09.00 ಗಂಟೆಗೆ ದಶರಥ ತಂದೆ ಸೈಬಣ್ಣಾ ಸಿರಗೆಕರ ವಯ:50 ವರ್ಷ ಸಾ/ ಕತ್ಳಳಿ ಈತನು ಕತ್ಳಳಿ ಗ್ರಾಮದ ತನ್ನ ಹೊಲ ಸರ್ವೆ ನಂ:05 ನೇದರ 01 ಎಕ್ಕರೆ ಜಮೀನಿನಲ್ಲಿ ಕಬ್ಬಿನ ಹೊಲದಲ್ಲಿ ಅಕ್ರಮವಾಗಿ ಗಾಂಜಾ ಬೆಳೆಯನ್ನು ಬೆಳೆದ ಬಗ್ಗೆ ಖಚಿತ ಬಾತ್ಮಿ ಬಂದಿದ್ದು ಬಾತ್ಮಿ ವಿಷಯ ಖಚಿತ ಪಡಿಸಿಕೊಂಡು ಸಿಬ್ಬಂದಿಯೊಂದಿಗೆ ಹೋಗಿ ದಾಳಿ ಮಾಡಿ ದಶರಥ ತಂದೆ ಸೈಬಣ್ಣಾ ಸಿರಗೆಕರ ವಯ:50 ವರ್ಷ ಸಾ/ ಕತ್ಳಳಿ ತಾ/ ಹುಮನಾಬಾದ ವಯ:50 ವರ್ಷ ಸಾ/ ಕತ್ಳಳಿ ಈತನನ್ನು ಹಿಡಿದುಕೊಂಡು, ಆತನ ಹೊಲದಲ್ಲಿ ಬೆಳೆದ ಗಾಂಜಾದ 04 ಗಿಡಗಳನ್ನು ಒಟ್ಟು 3 ಕಿಲೋ 450 ಗ್ರಾಂ ಅಂ.ಕಿ. ರೂ.17,250/- ದೊರಕಿದ್ದು, ಅರೋಪಿತನ ವಿರುದ್ದ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

**ಬಸವಕಲ್ಯಾಣ ಗ್ರಾಮೀಣ ಠಾಣೆ ಅಪರಾಧ ಸಂಖ್ಯೆ 111/2022 ಕಲಂ 87 ಕೆಪಿ ಕಾಯ್ದೆ :-**

ದಿನಾಂಕ: 13/09/2022 ರಂದು 09;45 ಗಂಟೆಗೆ ಪಿಎಸ್ಐ ರವರು ಠಾಣೆಯಲ್ಲಿದ್ದಾಗ ಗುಪ್ತ ಮಾಹಿತಿ ಬಂದಿದೇನೆಂದರೆ ರಾಜೇಶ್ವರ ಗ್ರಾಮದ ಸತ್ಯಾಶ್ರೀ ಪ್ರೌಢಶಾಲೆಯ ಹತ್ತಿರ ಖುಲ್ಲಾ ಜಾಗೆಯಲ್ಲಿ ಕೆಲವು ಜನರು ಗೋಲಾಕಾರವಾಗಿ ಕುಳಿತು ಹಣವನ್ನು ಪಣಕ್ಕೆ ಇಟ್ಟು ಅಂದರಭಾಹರ್ ಇಸ್ಪೇಟ ಜೂಜಾಟ ಆಡುತಿದ್ದಾರೆ ಅಂತಾ ಮಾಹಿತಿ ಬಂದ ಮೇರೆಗೆ ಸಿಬ್ಬಂದಿಯೊಂದಿಗೆ ಹೋಗಿ ದಾಳಿ ಮಾಡಿ ಸುತ್ತುವರೆದು ಹಿಡಿದು ಒಬ್ಬೊಬ್ಬರ ಹೆಸರು ಮತ್ತು ವಿಳಾಸ ವಿಚಾರಿಸಲು ತಮ್ಮ ಹೆಸರು 1] ಶ್ರೀಕಾಂತ ತಂದೆ ಜಗನ್ನಾಥ ಮೂಲಗೆ ವಯ:33 ವರ್ಷ ಜಾತಿ:ಎಸ,ಸಿ ದಲಿತ ಉ:ಕೂಲಿಕೆಲಸ ಸಾ:ಭೀಮನಗರ ರಾಜೇಶ್ವರ ಅಂತಾ ತಿಳಿಸಿದ್ದು ಇವನ ಹತ್ತಿರ 750 ರೂ ಇದ್ದವು 2] ಶರಣಬಸಪ್ಪಾ ತಂದೆ ಕಲ್ಲಪ್ಪಾ ಮೇಕ್ರೆ ವಯ:35 ವರ್ಷ ಜಾತಿ:ಲಿಂಗಾಯತ ಉ:ಬಸ್ಸ ಚಾಲಕ ಸಾ:ರೋಣ ಗಲ್ಲಿ ರಾಜೇಶ್ವರ ಅಂತಾ ತಿಳಿಸಿದ್ದು ಇವನ ಹತ್ತಿರ 650 ರೂ ಇದ್ದವು 3] ಸುನೀಲ ತಂದೆ ಮಲ್ಲಿಕಾರ್ಜುನ ಭಾಲ್ಕೆ ವಯ:35 ವರ್ಷ ಜಾತಿ:ಲಿಂಗಾಯತ ಉ:ಹೂಗಾರ ಸಾ:ಪಟೇಲ ಗಲ್ಲಿ ರಾಜೇಶ್ವರ ಅಂತಾ ತಿಳಿಸಿದ್ದು ಸದರಿಯವನ ಹತ್ತಿರ 950 ರೂ ಇದ್ದವು 4] ಸಂಜುಕುಮಾರ ತಂದೆ ಸುಭಾಷ ಭೂಶೇಟ್ಟಿ ವಯ:39 ವರ್ಷ ಜಾತಿ:ಲಿಂಗಾಯತ ಉ:ಚಾಲಕ ಸಾ:ಭೂಶೆಟ್ಟಿ ಗಲ್ಲಿ ರಾಜೇಶ್ವರ ಅಂತಾ ತಿಳಿಸಿದ್ದು ಇವನ ಹತ್ತಿರ 800 ರೂ ಇದ್ದವು 5] ಅಶ್ವಿನಕುಮಾರ ತಂದೆ ಪ್ರಭಾಕರ ಪಾಟೀಲ ವಯ:37 ವರ್ಷ ಜಾತಿ:ಮರಾಠಾ ಉ:ಒಕ್ಕಲುತನ ಸಾ:ಮರಾಠಾ ಗಲ್ಲಿ ರಾಜೇಶ್ವರ ಅಂತಾ ತಿಳಿಸಿದ್ದು ಇವನ ಹತ್ತಿರ 650 ರೂ ಇದ್ದವು ಮತ್ತು ಎಲ್ಲರ ಮಧ್ಯದಲ್ಲಿ ಜೂಜಾಟದಲ್ಲಿ ತೊಡಗಿಸಿದ ನಗದು ಹಣ 1800/- ರೂಗಳು ಇದ್ದವು ಪುನಃ ವಿಚಾರಣೆ ಮಾಡಲು ತಾವೆಲ್ಲರೂ ಸೆರಿ ಹಣವನ್ನು ಪಣಕ್ಕೆ ಇಟ್ಟು ಅಂದರಭಾಹರ್ ಎಂಬ ನಶಿಬಿನ ಇಸ್ಪೇಟ ಜೂಜಾಟ ಆಡುತಿದ್ದ ಬಗ್ಗೆ ಒಪ್ಪಿಕೊಂಡಿದರಿಂದ ಸದರಿಯವರು ಇಸ್ಪೆಟ ಜೂಜಾಟದಲ್ಲಿ ತೋಡಗಿಸಿದ ಒಟ್ಟು ನಗದು ಹಣ 5,600/- ರೂ ಹಾಗು 52 ಇಸ್ಪೇಟ ಎಲೆಗಳು ಪಂಚರ ಸಮಕ್ಷಮ ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.